# ಹಾರಾಟಕ್ಕೆ ನಿಯಮಗಳು ಶೀಘ್ರ

ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ಡ್ರೋಣ್‌ಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕರಡು ನಿಯಮಾವಳಿಗಳನ್ನು ರೂಪಿಸಿದೆ. ಇನ್ನಷ್ಟೇ ಈ ನಿಯಮಾವಳಿಗಳು ಜಾರಿಯಾಗಬೇಕಿದೆ.

ಟೇಕ್‌ಆಫ್ ತೂಕವನ್ನು (ಡ್ರೋಣ್ ಮತ್ತು ಅವು ಹೊತ್ತಿರುವ ಸಲಕರಣೆ/ಸರಕುಗಳ ತೂಕ) ಆಧರಿಸಿ ಡಿಜಿಸಿಎ ಡ್ರೋಣ್‌ಗಳನ್ನು ಐದು ವರ್ಗಗಳಾಗಿ ವಿಂಗಡಿಸಿದೆ. ಟೇಕ್‌ಆಫ್ ತೂಕ 250 ಗ್ರಾಂಗಳಿಗಿಂತಲೂ ಕಡಿಮೆ ಇರುವವನ್ನು ನ್ಯಾನೊ ಡ್ರೋಣ್‌ಗಳೆಂದು, 250 ಗ್ರಾಂನಿಂದ 2 ಕೆ.ಜಿ.ವರೆಗಿನವುಗಳನ್ನು ಮೈಕ್ರೊ ಡ್ರೋಣ್‌ಗಳೆಂದು ವರ್ಗೀಕರಿಸಲಾಗಿದೆ. 2 ಕೆ.ಜಿ.ಯಿಂದ 25 ಕೆ.ಜಿ.ವರೆಗಿನ ಡ್ರೋಣ್‌ಗಳನ್ನು ಮಿನಿ ಡ್ರೋಣ್‌ಗಳೆಂದು, 25 ಕೆ.ಜಿ.ಯಿಂದ 150 ಕೆ.ಜಿ.ವರೆಗೆ ತೂಗುವವನ್ನು ಸ್ಮಾಲ್ ಡ್ರೋಣ್‌ಗಳೆಂದು ಮತ್ತು 150 ಕೆ.ಜಿ.ಗಿಂತಲೂ ಹೆಚ್ಚಿನ ಟೇಕ್‌ಆಫ್ ತೂಕದವನ್ನು ಲಾರ್ಜ್ ಡ್ರೋಣ್‌ಗಳೆಂದು ಡಿಜಿಸಿಎ ವರ್ಗೀಕರಿಸಿದೆ.

ಈ ನಿಯಮಾವಳಿಗಳು ಜಾರಿಯಾದಲ್ಲಿ ಭಾರತದಲ್ಲಿ ಬಳಸುವ ಎಲ್ಲಾ ಡ್ರೋಣ್‌ಗಳನ್ನು ಡಿಜಿಸಿಎ ಬಳಿ ನೋಂದಣಿ ಮಾಡಿಸಬೇಕಾಗುತ್ತದೆ. 50 ಅಡಿಗಿಂತಲೂ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸುವ ಸಾಮರ್ಥ್ಯವಿರುವ ನ್ಯಾನೊ ಡ್ರೋಣ್‌ಗಳಿಗೆ ಮಾತ್ರ ಈ ನೋಂದಣಿಯಿಂದ ವಿನಾಯಿತಿ ಇರಲಿದೆ. ಉಳಿದಂತೆ ಎಲ್ಲಾ ಡ್ರೋಣ್‌ಗಳಿಗೂ ಡಿಜಿಸಿಎ ನೋಂದಣಿ ಸಂಖ್ಯೆ–ಯೂನಿಕ್ ಐಡೆಂಟಿಫಿಕೇಷನ್ ನಂಬರ್– ವಿಶಿಷ್ಟ ಗುರುತಿನ ಸಂಖ್ಯೆ: ಯುಐಎನ್ ಅನ್ನು ನೀಡಲಿದೆ. ಈ ನೋಂದಣಿ ಸಂಖ್ಯೆ ಇರುವ ಫಲಕವನ್ನು ಡ್ರೋಣ್ ಮೇಲೆ ಅಂಟಿಸಬೇಕಾಗುತ್ತದೆ.

ನೋಂದಣಿಗೂ ಮುನ್ನ ಡ್ರೋಣ್ ಮಾಲೀಕ ಹಲವು ದಾಖಲೆ ಪತ್ರಗಳನ್ನು ಡಿಜಿಸಿಎಗೆ ನೀಡಬೇಕಾಗುತ್ತದೆ. ಡ್ರೋಣ್‌ನ ಮಾದರಿ, ತಯಾರಕರು, ಶಕ್ತಿ – ಸಾಮರ್ಥ್ಯಗಳ ವಿವರಗಳನ್ನು ಒಳಗೊಂಡ ದಾಖಲೆ ಪತ್ರಗಳು, ಡ್ರೋಣ್ ಅನ್ನು ಚಲಾಯಿಸಲಿರುವ ಆಪರೇಟರ್‌ನ ವೈಯಕ್ತಿಕ ವಿವರ, ಗುರುತಿನ ಚೀಟಿ ಮತ್ತು ಡ್ರೋಣ್ ಚಲಾವಣೆಗೆ ಸಂಬಂಧಿಸಿದ ತರಬೇತಿ ಪ್ರಮಾಣ ಪತ್ರಗಳನ್ನು, ಡ್ರೋಣ್ ಅನ್ನು ಯಾವ ಉದ್ದೇಶಕ್ಕೆ ಬಳಸುತ್ತೇವೆ ಎಂಬ ಮುಚ್ಚಳಿಕೆ ಪತ್ರವನ್ನೂ ಮಾಲೀಕ ಸಲ್ಲಿಸಬೇಕಾಗುತ್ತದೆ. ಹೀಗೆ ನೋಂದಣಿ ಮಾಡಿ ಪರವಾನಗಿ ನೀಡಿದ ನಂತರ ಅದಕ್ಕೆ ಐದು ವರ್ಷಗಳ ವಾಯಿದೆ ಇರುತ್ತದೆ. ಆನಂತರ ಅದನ್ನು ನವೀಕರಣ ಮಾಡಿಸಬೇಕಾಗುತ್ತದೆ.

ನೋಂದಣಿ ಮಾಡಿಸಿ, ಪರವಾನಗಿ ಪಡೆದುಕೊಂಡಿದ್ದರೂ ದೇಶದ ಎಲ್ಲೆಡೆ ಡ್ರೋಣ್‌ನ ಹಾರಾಟಕ್ಕೆ ಅವಕಾಶ ಇರುವುದಿಲ್ಲ. ದೇಶದ ಎಲ್ಲಾ ವಿಮಾನ ನಿಲ್ದಾಣಗಳ ಹೊರ ಆವರಣದ ಐದು ಕಿ.ಮೀ. ವ್ಯಾಪ್ತಿಯಲ್ಲಿ ಡ್ರೋಣ್ ಹಾರಿಸುವಂತಿಲ್ಲ. ಅಂತರರಾಷ್ಟ್ರೀಯ ಗಡಿ (ಐಬಿ), ಗಡಿ ನಿಯಂತ್ರಣಾ ರೇಖೆ (ಎಲ್‌ಒಸಿ) ಮತ್ತು ವಾಸ್ತವ ಗಡಿರೇಖೆಗಳಿಂದ (ಎಲ್‌ಎಸಿ) 50 ಕಿ.ಮೀ. ವ್ಯಾಪ್ತಿಯಲ್ಲಿ ಡ್ರೋಣ್ ಹಾರಿಸುವಂತಿಲ್ಲ.



ಬೆಂಗಳೂರಿನಲ್ಲಿ ಡ್ರೋಣ್ ಕ್ಯಾಮೆರಾ ಪ್ರದರ್ಶನ

ದೆಹಲಿಯಲ್ಲಿ ರಾಷ್ಟ್ರಪತಿ ಭವನ ಮತ್ತು ಅದರ ಬಳಿ ಇರುವ ವಿಜಯ ಚೌಕ್‌ನಿಂದ ಐದು ಕಿ.ಮೀ. ವ್ಯಾಪ್ತಿಯಲ್ಲಿ, ಅತ್ಯಂತ ಜನದಟ್ಟಣೆಯ ಪ್ರದೇಶಗಳಲ್ಲಿ, ಸೇನಾ ನೆಲಗಳಿಂದ ಐದು ಕಿ.ಮೀ. ವ್ಯಾಪ್ತಿಯಲ್ಲಿ, ಪರಿಸರ ಸೂಕ್ಷ್ಮ ವಲಯಗಳಾದ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳಲ್ಲಿ ಡ್ರೋಣ್‌ಗಳನ್ನು ಹಾರಿಸುವಂತಿಲ್ಲ.

ರಾಷ್ಟ್ರೀಯ ಉದ್ಯಾನ ಮತ್ತು ಅಭಯಾರಣ್ಯಗಳಲ್ಲಿ ಅಧ್ಯಯನದ ಉದ್ದೇಶಕ್ಕೆ ಡ್ರೋಣ್ ಬಳಸಲು ಅವಕಾಶವಿದೆಯಾದರೂ ಅದಕ್ಕೆ ಹಲವು ಹಂತದಲ್ಲಿ ಅನುಮತಿ ಪಡೆದುಕೊಳ್ಳಬೇಕಿದೆ. ಇನ್ನು ಡ್ರೋಣ್ ಹಾರಾಟ ನಿಷೇಧಿತ ವಲಯದಲ್ಲಿರುವ ಮನೆ– ಶೈಕ್ಷಣಿಕ ಸಂಸ್ಥೆ– ಸಂಶೋಧನಾ ಸಂಸ್ಥೆಗಳ ಒಳ ಆವರಣದಲ್ಲಿ ನ್ಯಾನೊ ಡ್ರೋಣ್‌ಗಳನ್ನು ಹಾರಾಟ ನಡೆಸಲು ಸ್ಥಳೀಯ ಪೊಲೀಸರಿಂದ ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಲಿದೆ. ಲಾರ್ಜ್ ಡ್ರೋಣ್‌ಗಳನ್ನು ಎಲ್ಲೇ ಹಾರಿಸಬೇಕಿದ್ದರೂ, ಗೃಹ ಸಚಿವಾಲಯ ಮತ್ತು ರಕ್ಷಣಾ ಸಚಿವಾಲಯ ಮತ್ತು ನಾಗರಿಕ ವಿಮಾನಯಾನ ಸಚಿವಾಲಯದ ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಲಿದೆ.

ನಿರ್ವಹಣಾ ವೆಚ್ಚವೂ ಕಡಿಮೆಯಾಗಲಿದೆ. ಹೀಗಾಗಿಯೇ ಈ ಉದ್ಯಮವನ್ನು ಉತ್ತೇಜಿಸಲು ನಾವು ಮುಂದಡಿ ಇಟ್ಟಿದ್ದೇವೆ' ಎಂದು ಕರ್ನಾಟಕದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹೇಳಿದೆ.

ಈ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿರುವ ರಾಷ್ಟ್ರೀಯ ಆರೋಗ್ಯ ಸುರಕ್ಷಾ ಯೋಜನೆಯ ಕೆಲವು ಕಾರ್ಯಕ್ರಮಗಳ ಜಾರಿಗೆ ಡ್ರೋಣ್ ಬಳಸಿಕೊಳ್ಳುವ ಬಗ್ಗೆ ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಈಚೆಗೆ ಮೂರು ದಿನಗಳ ವಿಚಾರ ಸಂಕಿರಣ ನಡೆಯಿತು. ಕುಗ್ರಾಮಗಳಿಗೆ ತುರ್ತು ಸಂದರ್ಭದಲ್ಲಿ ಔಷಧಗಳು ಮತ್ತು ವೈದ್ಯಕೀಯ ಯಂತ್ರೋಪಕರಣಗಳನ್ನು ಡ್ರೋಣ್ ಮೂಲಕ ರವಾನಿಸುವುದನ್ನು ಕಾರ್ಯರೂಪಕ್ಕೆ ತರಬಹುದು ಎಂಬ ಅಭಿಪ್ರಾಯ ವಿಚಾರ ಸಂಕಿರಣದಲ್ಲಿ ವ್ಯಕ್ತವಾಯಿತು. ಇಂಥದ್ದೊಂದು ವಿಚಾರವನ್ನು ಮುನ್ನೆಲೆಗೆ ತಂದದ್ದು 'ಏರೊನಾಟಿಕಲ್ ಸೊಸೈಟಿ ಆಫ್ ಇಂಡಿಯಾ'. 'ಈ ಸಂಬಂಧ ಕರಡು ಒಂದನ್ನು ಸಿದ್ಧಪಡಿಸಿ, ನೀತಿ ಆಯೋಗಕ್ಕೆ ಕಳುಹಿಸಲಾಗುವುದು' ಎಂದು ಸೊಸೈಟಿಯ ನಿರ್ದೇಶಕ ಆರ್.ಕೆ.ತ್ಯಾಗಿ ಹೇಳಿದ್ದಾರೆ.

'ಡ್ರೋಣ್ ನಿಯಮಾವಳಿಯನ್ನು ಇನ್ನೆರಡು ತಿಂಗಳಲ್ಲಿ ಜಾರಿಗೆ ತರುತ್ತೇವೆ' ಎಂದು ನಾಗರಿಕ ವಿಮಾನಯಾನ ಸಚಿವಾಲಯವು ಘೋಷಿಸಿ ಈಗಾಗಲೇ ಎರಡು ತಿಂಗಳು ಕಳೆದಿವೆ. ಈ ನಿಯಮಾವಳಿಗಳು ಜಾರಿಯಾದಲ್ಲಿ, ನಮ್ಮ ನಿಮ್ಮ ಮನೆಗಳಿಗೆ ಸರಕುಗಳನ್ನು ಹೊತ್ತುಕೊಂಡು ಡ್ರೋಣ್‌ಗಳು ಬರುವ ದಿನಗಳು ದೂರವಿಲ್ಲ!